


# ಸ್ವಯಂಚಾಲಿತ ಕಾರು

## ರಸ್ತೆ ಕ್ರಾಂತಿಗೆ ಸಿದ್ಧರಾಗಿ!

**ಇನ್ನೇನು ಮುಂದಿನ ವರ್ಷದ ಕೊನೆಗೆ ಸ್ವಯಂಚಾಲಿತ ಕಾರುಗಳು ರಸ್ತೆಗಿಳಿಯಲಿವೆ. ಸ್ವಯಂಚಾಲಿತ ಕಾರುಗಳ ದಾಳಿಯೊಂದಿಗೆ ಸಾರಿಗೆ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಲಿವೆ. ಜನರು ಮಾತ್ರವಲ್ಲ, ಸರ್ಕಾರಗಳೂ ಈ ಹೊಸ ಕ್ರಾಂತಿಗೆ ಸಿದ್ಧರಾಗಬೇಕಿದೆ.**

■ ಪ್ರಕಾಶ ಶಾನುಬೋಗ

ಬೆಂಗಳೂರಿನಂತಹ ಅತ್ಯಂತ ಜನನಿಬಿಡ ಮತ್ತು ಚಟುವಟಿಕೆಯ ಮಹಾನಗರದಲ್ಲಿ ಓಲಾ, ಉಬರ್, ಮೇರು ಮುಂತಾದ ಬಾಡಿಗೆ ಕಾರುಗಳು ಜನರ ಓಡಾಟವನ್ನು ಸುಲಭಗೊಳಿಸಿವೆ. ಮೊಬೈಲ್‌ನಲ್ಲಿ ಆ್ಯಪ್‌ನ ಒಂದು ಗುಂಡಿ ಒತ್ತಿದರೆ ಬಾಡಿಗೆ ಕಾರು ಮನೆಬಾಗಿಲಿಗೇ ಬಂದು ನಿಮ್ಮನ್ನು ಕರೆದೊಯ್ಯುತ್ತದೆ. ಈ ಕಾರುಗಳ ಬಾಡಿಗೆ ಕೂಡಾ ದುಬಾರಿಯಲ್ಲ. ಹೋಗುವ ದಾರಿ ಗೊತ್ತಿಲ್ಲದಿದ್ದರೂ ಇನ್ನೊಂದು ಮೊಬೈಲ್ ಆ್ಯಪ್ ನೆರವಿಗೆ ಬರುತ್ತದೆ. ಜಿಪಿಎಸ್ ಇರುವುದರಿಂದ ಇದು ಸಾಕಷ್ಟು ಸುರಕ್ಷಿತ ಪ್ರಯಾಣವೂ ಹೌದು. ಸ್ವಂತ ಡ್ರೈವಿಂಗ್ ಮಾಡುವುದು ಕಷ್ಟವಾದವರಿಗೆ ಹಾಗೂ ಡ್ರೈವಿಂಗ್ ಗೊತ್ತಿಲ್ಲದವರಿಗೆ ಇದೊಂದು ವರದಾನವೇ.

ತಂತ್ರಜ್ಞಾನಕ್ಕೆ ತೃಪ್ತಿ ಎಂಬುದಿಲ್ಲ. ಅದೂ ಸದಾ ಅತೃಪ್ತ. ಇನ್ನೀಗ ಬರಲಿರುವುದು ಚಾಲಕರಹಿತ ಕಾರು. ನಿಮ್ಮ ಕಾರಿಗೆ ಚಾಲಕ ಬೇಕಿಲ್ಲ.

